# ಎಂಥವನೆಂಥವನೆ ರಂಗಯ್ಯ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 251
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 94
3. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 120
4. **Note:** Lyrics given here are as per Ref. 1.  The wordings as in Ref. 2 and Ref. 3 are almost same as these lyrics.
5. **Note:** Singer has followed these lyrics.

ರಾಗ: ಶಂಕರಾಭರಣ                ತಾಳ: ಅಟ

ಎಂಥವನೆಂಥವನೆ ರಂಗಯ್ಯ ಎಂಥವನೆಂಥವನೆ    ॥ ಪ ॥

ಆಗಮವನು ತಂದವನೆ ರಂಗ
ಬೇಗದಿ ಗಿರಿಯ ಪೊತ್ತವನೆ
ಮೂಗಿಂದ ಭೂಮಿಯನೆತ್ತಿದನೆ ಶಿಶು
ಕೂಗಲು ಕಂಭದಿಂದೊದಗಿದನೆ    ॥ ೧ ॥

ಧರಣಿಯ ಈರಡಿ ಮಾಡಿದನೆ ಭೂ-
ಸುರನಾಗಿ ಪರಶುವ ಧರಿಸಿದನೆ
ಭರದಿ ಕೋಡಗ ಹಿಂಡು ಕೂಡಿದನೆ ಫಣಿಯ
ಶಿರದಲಿ ಕುಣಿ ಕುಣಿದಾಡಿದನೆ ರಂಗ    ॥ ೨ ॥

ಉಟ್ಟಿದ್ದ ಬಟ್ಟೆಯ ಬಿಸುಟಿಹನೆ ರಂಗ
ದಿಟ್ಟ ತೇಜಿಯನೇರಿ ಮೆರೆಯುವನೆ
ದುಷ್ಟರನೆಲ್ಲ ಸಂಹರಿಸಿದನೆ ನಮ್ಮ
ದಿಟ್ಟ ಪುರಂದರ ವಿಠ್ಠಲನೆ    ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಹಾಡಿನಲ್ಲಿ ದಶಾವತಾರದ ಲೀಲೆಗಳಿವೆ.

**ಆಗಮವನು ತಂದವನೆ** = ಮತ್ಸ್ಯಾವತಾರ

**ಗಿರಿಯ ಪೊತ್ತವನೆ** = ಕೂರ್ಮಾವತಾರ

**ಮೂಗಿಂದ ಭೂಮಿಯನೆತ್ತಿದನೆ** = ವರಾಹಾವತಾರ

**ಶಿಶು ಕೂಗಲು ಕಂಭದಿಂದೊದಗಿದನೆ** = ನರಸಿಂಹಾವತಾರ

**ಧರಣಿಯ ಈರಡಿ ಮಾಡಿದನೆ** = ವಾಮನವತಾರ

**ಭೂ-ಸುರನಾಗಿ ಪರಶುವ ಧರಿಸಿದನೆ** = ಪರಶುರಾಮಾವತಾರ

**ಭರದಿ ಕೋಡಗ ಹಿಂಡು ಕೂಡಿದನೆ** = ರಾಮಾವತಾರ

**ಫಣಿಯ ಶಿರದಲಿ ಕುಣಿ ಕುಣಿದಾಡಿದನೆ** = ಕೃಷ್ಣಾವತಾರ

**ಉಟ್ಟಿದ್ದ ಬಟ್ಟೆಯ ಬಿಸುಟಿಹನೆ** = ಬೌದ್ಧಾವತಾರ

**ದಿಟ್ಟ ತೇಜಿಯನೇರಿ ಮೆರೆಯುವನೆ** = ಕಲ್ಕ್ಯಾವತಾರ

**Classification:** Keerthane
**Ankita:** Purandara Vittala
**Location:** NA
**Category:** Krishna Leele, dashavatara
**Sub-Category:** Krishna, ranga, dashavatara, moogu, parvata, koosu, bhumi, sura, uraga, kudure,
**Pravachana:** NA
**Explanation:** NA